MVC No. 615/2019 PW-1

<u>ದಿನಾಂಕ **14.12.2023** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ವಕೀಲರಿಂದ ಃ</u>

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.ನಾನು ಸದರಿ ದಿನ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಹೋಂಡಾ ಆಕ್ಟೀವಾ ನನಗೆ ಸೇರಿದ್ದಾಗಿರುತ್ತದೆ. ಸದರಿ ವಾಹನಕ್ಕೆ ಸಂಬಂದಪಟ್ಟ ಆರ್ ಸಿ ಮತ್ತು ವಿಮಾ ಪಾಲಿಸಿ ಹಾಗೂ ನನಗೆ ಸೇರಿದ ಡಿ ಎಲ್ ನನ್ನ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಅಪಘಾತವಾದ ಸ್ಥಳ ರಸ್ತೆಯಲ್ಲಿ ಡೌನ್ ಇತ್ತು ಮತ್ತು ಸರ್ಕಲ್ ಇತ್ತು. ಸದರಿ ದಿನ ನನಗೆ ರಾತ್ರಿ ಪಾಳಿಯ ಕರ್ತವ್ಯವಿತ್ತು, ನನ್ನ ಕೆಲಸದ ಅವಧಿ ರಾತ್ರಿ 7.00 ಗಂಟೆಯಿಂದ ಬೆಳಗ್ಗೆ 6.00 ಗಂಟೆಯವರೆಗೆ ಆಗಿತ್ತು. ನನ್ನ ವಾಹನದ ಎಡಭಾಗಕ್ಕೆ ಪಲ್ಸರ್ ವಾಹನ ಡಿಕ್ಕಿ ಪಡಿಸಿರುತ್ತದೆ. ಅಪಘಾತದ ಪರಿಣಾಮ ನನ್ನ ವಾಹನದ ಎಡಭಾಗಕ್ಕೆ ಜಖಂ ಗಳು ಆಗಿರುತ್ತದೆ ಮತ್ತು ನನ್ನ ದೇಹದ ಎಡಭಾಗಕ್ಕೆ ಜಖಂ ಗಳು ಆಗಿರುತ್ತದೆ. ನನ್ನ ದ್ವಿಚಕ್ರ ವಾಹನಕ್ಕೆ ಏನೇ ನು ಜಖಂ ಗಳು ಆಗಿವೆ ಎನ್ನುವ ಬಗ್ಗೆ ಭಾವಚಿತ್ರ ತೆಗೆಸಿಲ್ಲ ಸದರಿ ದಿನ ನಾನು ಹೆಲ್ಮೆಟ್ ಧರಿಸದೇ ಇದ್ದ ಕಾರಣ ನನ್ನ ತಲೆಯ ಭಾಗಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸಾಕ್ಷಿ ನಾನು ಹೆಲ್ಮೆಟ್ ಧರಿಸಿದ್ದೆ ಎಂದು ನುಡಿಯುತ್ತಾರೆ. ಈ ಅಪಘಾತಕ್ಕೆ ಸಂಬಂದಪಟ್ಟಂತೆ ನಮ್ಮ ಮನೆಯವರು ದೂರನ್ನು ನೀಡಿರುತ್ತಾರೆ. ಆನಂದ್ ಎನ್ನುವವರು ನನ್ನ ಭಾಮೈದ. ಸದರಿ ದಿನ ನನ್ನ ಜೊತೆ ನನ್ನ ಭಾಮೈದ ಬರುತ್ತಿದ್ದರು. ಅಪಘಾತವಾದಿಂದ ಆನಂದ್ ರವರಿಗೂ ಸಣ್ಣ ಪುಟ್ಟ ಗಾಯಗಳು ಆಗಿತ್ತು. ಅಪಘಾತವಾದ ನಂತರ ಇಬ್ಬರನ್ನೂ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಅಲ್ಲಿಂದ ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಯಾವ ರೀತಿ ಗಾಯಗಳು ಆಗಿತ್ತು ಎಂದು ಹೇಳಿಲ್ಲ ಕಾರಣ ನನಗೆ ಪ್ರಜ್ಞೆ ಇರಲಿಲ್ಲ. ಈ ಅಪಘಾತವಾದ ನಂತರ ಪೋಲಿಸರು ನಿಪಿ-5 ರಂತೆ ಐ ಎಂ ವಿ ವರದಿಯನ್ನು ಸಲ್ಲಿಸಿದ್ದು ಸದರಿ ವರದಿಯ ಪ್ರಕಾರ ನಮ್ಮ ವಾಹನದ ಮುಂಭಾಗಕ್ಕೆ ಜಖಂ ಆಗಿದೆ ಎಂದು ನಮೂದಿಸಿರುತ್ತಾರೆಂದರೆ ಹೌದು. ಸದರಿ ದಿನ ನಾನು ಮತ್ತು ಆನಂದ್ ರವರು ನನ್ನ

ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಅಪಘಾತವನ್ನು ನಾವೇ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರೊಂದಿಗೆ ಶಾಮೀಲಾಗಿ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನನಗೆ ವಿಕ್ಟೋರಿಯ ಆಸ್ಪತ್ರೆಯಲ್ಲಿ ಡಾ. ನಂದೀಶ್ ರವರು ಚಿಕಿತ್ಸೆಯನ್ನು ನೀಡಿರುತ್ತಾರೆ. ವಿಕ್ಟೋರಿಯ ಆಸ್ಪತ್ರೆಯಲ್ಲಿ  ಏನು ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಮನೆ ಬದಲಾಯಿಸುವ ಸಮಯದಲ್ಲಿ ದಾಖಲೆಗಳು ಕಳೆದು ಹೋಗಿವೆ. ಸದರಿ ಅಪಘುತಾದಿಂದ ನನಗೆ ಸಣ್ಣ ಪುಟ್ಟ ಗಾಯಗಳು ಆಗಿತ್ತು ಆ ಕಾರಣದಿಂದ ನಾನು ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಗಳು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 2 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಮತ್ತು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನಂತೆಯೇ ಈಗಲೂ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನಗೆ ಸಣ್ಣ ಪುಟ್ಟ ಗಾಯಗಳು ಆಗಿದ್ದರಿಂದ ನನ್ನ ದಿನನಿತ್ಯದ ಕೆಲಸಗಳಿಗೆ ಯಾವುದೇ ತೊಂದರೆಗಳು ಆಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.